ನನ್ನ ಕತೆಗೆ ಚಿ. ಉದಯಶಂಕರ್ ಸಂಭಾಷಣೆ ಬರೆಯಬೇಕು ಎನ್ನುವುದು ನನ್ನಿಷ್ಟವಾಗಿತ್ತು. ಆದರೆ, ಸಿದ್ದಲಿಂಗಯ್ಯನವರು ನನಗೇ ಬರೆಯಲು ಹಚ್ಚಿದರು. ಅಳುಕಿನಿಂದಲೇ ಸಂಭಾಷಣೆ ಬರೆದೆ. ಕರಡು ಓದಿದ ಮೇಲೆ ಅಲ್ಲಲ್ಲಿ ತಿದ್ದುಪಡಿ ಸೂಚಿಸಿದರು. ಇಲ್ಲಿ ಅಳು ಬರಬೇಕು, ಇಲ್ಲಿ ನಗು ತರಿಸಬೇಕು, ಇಲ್ಲಿ ಜನ ಚಪ್ಪಾಳೆ ಹೊಡೆಯುವಂತೆ ಸಂಭಾಷಣೆ ಇರಬೇಕು ಎಂದೆಲ್ಲ ಸೂಚನೆ ಕೊಟ್ಟರು. ಬರೆದು, ತಿದ್ದಿ ಹೈರಾಣಾದೆ. ಇನ್ನೂ ಹೇಗೆ ಬರೆಯುವುದು ಎಂದು ಬೇಸರದ ಧಾಟಿಯಲ್ಲಿ ಕೇಳಿದಾಗ, ಅವರು ಹೇಳಿದ್ದು: 'ನನಗೇ ಬರೆಯಲು ಬಂದಿದ್ದರೆ ಅದನ್ನೂ ಮಾಡುತ್ತಿದ್ದೆ. ನಿಮಗೆ ಬರುತ್ತದಲ್ಲ; ಅದಕ್ಕೇ ಹೇಳುತ್ತಿರುವೆ.' ಕೊನೆಗೆ ಸ್ಕ್ರಿಪ್ಟ್ ಪೂರ್ತಿ ಸಿದ್ಧವಾದ ಮೇಲೆ ಎರಡೂ ಸಿನಿಮಾಗಳು ಅನೌನ್ಸ್ ಆದವು. 'ಮದಕರಿನಾಯಕ' ಬಗೆಗೆ ಕೂಡ ಜಾಹೀರಾತು ಕೊಟ್ಟರು. ಆ ಸಿನಿಮಾದ ಸಂಭಾಷಣಕಾರನಾಗಿ ನನ್ನನ್ನು ಪರಿಚಯಿಸುತ್ತಿರುವುದಾಗಿ ಮಾಧ್ಯಮದವರನ್ನು ಕರೆಸಿ ತಿಳಿಸಿದರು. ಚಿತ್ರದುರ್ಗದಲ್ಲಿ ಆಗ ಸಂಚಲನ.

'ಮದಕರಿನಾಯಕ' ಕಾದಂಬರಿ ಸಿದ್ಧವಾಯಿತು. ವಿವಾದವೂ ಆಯಿತು. ಅದರ ಬಿಡುಗಡೆಯನ್ನು ಚಿತ್ರದುರ್ಗದಲ್ಲಿ ಅದ್ದೂರಿಯಾಗಿ ಮಾಡಿದೆವು. ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಜನ ಸೇರಿದ ನಭೂತೋ ನಭವಿಷ್ಯತಿ ಎಂಬಂತಹ ಕಾರ್ಯಕ್ರಮ ಅದು. ಸಿದ್ದಲಿಂಗಯ್ಯನವರೇ ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಬಂದಿದ್ದರು.

**◆ ಅಲ್ಲಿಂದ ನಾಗಾಭರಣ ನಿಮಗೆ ಇನ್ನೊಂದು ಅವಕಾಶ ಕೊಟ್ಟರಲ್ಲವೇ?**

'ಪ್ರಾಯ ಪ್ರಾಯ ಪ್ರಾಯ' ಎಂಬ ಸಿನಿಮಾಗೆ ನಾಗಾಭರಣ ಒಳ್ಳೆಯ ಕತೆ ಮಾಡಿದ್ದರು. ಕಾಲೇಜು, ಹಾಸ್ಟೆಲ್ ಎರಡೇ ಇಟ್ಟುಕೊಂಡು ಕತೆ ಸೃಷ್ಟಿಸಿದ್ದರು. ವರದಪ್ಪ ಹಾಗೂ ಚಂದೂಲಾಲ್ ಜೈನ್ ಅದರ ನಿರ್ಮಾಪಕರು. ಕಾಲೇಜು ಸಂಭಾಷಣೆಯನ್ನು ನಾನು ಚೆನ್ನಾಗಿ ಬರೆಯಬಲ್ಲೆ ಎನ್ನುವುದನ್ನು ಗುರುತಿಸಿ ನಾಗಾಭರಣ ನನ್ನನ್ನು ಕರೆಸಿದ್ದರು. ತಾಳ್ಮೆಯಿಂದ ಮಾತನಾಡಬೇಕು ಎಂದು ಸಿದ್ದಲಿಂಗಯ್ಯನವರು ಮೊದಲೇ ಬುದ್ಧಿ ಹೇಳಿ ಕಳುಹಿಸಿದ್ದರು.

ವರದಪ್ಪನವರನ್ನು ಒಪ್ಪಿಸುವುದು ಕಷ್ಟವಿತ್ತು. ಕತೆ ಚೆನ್ನಾಗಿದೆ ಎಂದರೂ ಯಾಕೆ ಎಂದು ಕೇಳುವವರ ಪೈಕಿ. ಈ ಕತೆ ಯಾಕೆ ಚೆನ್ನಾಗಿದೆ ಎಂದು ಕೇಳಿದರು. ಅಪ್ಪ ಅಮ್ಮನೇ ಪ್ರೀತಿಗೆ ವಿಲನ್. ಅವರೇ ಇಲ್ಲದೆ ಬರೀ ಕಾಲೇಜು, ಹಾಸ್ಟೆಲ್ ಇಟ್ಟುಕೊಂಡು ಮಾಡಿರುವ ಹೊಸ ರೀತಿಯ ಕತೆ ಇದು ಎಂದೆ. 'ಕಾಮಿಡಿ ಬೇಕಲ್ರೀ' ಎಂದರು. ಅದಕ್ಕೆ ಸಂಭಾಷಣೆ ಬರೆಯುವ ಸವಾಲು ನನ್ನದಾಯಿತು.

ಕಾಮಿಡಿ ದೃಶ್ಯಗಳನ್ನು ನಾನು ಮಿಮಿಕ್ರಿ ಶೈಲಿಯಲ್ಲೇ ಹೇಳುತ್ತಿದ್ದೆ. ಬಾಲಕೃಷ್ಣ, ಮುಖ್ಯಮಂತ್ರಿ ಚಂದ್ರು, ಧೀರೇಂದ್ರ ಗೋಪಾಲ್ ಹೀಗೆ ಎಲ್ಲರ ಶೈಲಿಯಲ್ಲಿ ನಾನು ಸಂಭಾಷಣೆ ಹೇಳುತ್ತಿದ್ದೆ. ಸಿದ್ದಲಿಂಗಯ್ಯನವರೂ ಈ ಶೈಲಿಯನ್ನು ಕೇಳಿಯೇ ಕೆಲವರನ್ನು ಪಾತ್ರಕ್ಕೆ ಆಯ್ಕೆ ಮಾಡಿದ್ದರು. ವರದಪ್ಪನವರಿಗೆ ನಾನು ಸಂಭಾಷಣೆ ಹೇಳುವ ಈ ಧಾಟಿ ಇಷ್ಟವಾಯಿತು. ಆದರೂ ಅನೇಕ ಸೀನ್‌ಗಳಲ್ಲಿ 'ಅದು ಸರಿಯಿಲ್ಲ, ಇದು ಸರಿಯಿಲ್ಲ' ಎನ್ನುತ್ತಿದ್ದರು. ನನಗೆ ತಲೆಕೆಟ್ಟುಹೋಯಿತು. ಒಂದೊಂದು ಸೀನ್‌ಗೆ ಹತ್ತು ಹತ್ತು ರೀತಿ ಸಂಭಾಷಣೆ ಬರೆದೆ. ಆಗ ಸಿದ್ದಲಿಂಗಯ್ಯನವರನ್ನು ಭೇಟಿ ಮಾಡಿದ ವರದಪ್ಪ, 'ಇದೇನ್ರೀ... ಸೀರೆ ವ್ಯಾಪಾರದ ತರಹ ಆಗಿಹೋಯಿತಲ್ಲ... ಹತ್ತು ತರಹ ಸಂಭಾಷಣೆ ಬರೀತಾರೆ' ಎಂದಿದ್ದರಂತೆ. ಕೊನೆಗೂ ಅವರು ಒಪ್ಪುವಂತೆ ಸಂಭಾಷಣೆ ಬರೆದಿದ್ದಾಯಿತು. ಇಷ್ಟಪಟ್ಟರು.

ಅದೇ ಸಂದರ್ಭದಲ್ಲಿ 'ಬೆತ್ತಲೆ ಸೇವೆ' ಸಿನಿಮಾಗೆ ನಿರ್ದೇಶಕ ಕೆ.ವಿ. ಜಯರಾಂ ನನ್ನಿಂದಲೇ ಸಂಭಾಷಣೆ ಬರೆಸಿದ್ದರು. ನಿರ್ಮಾಪಕ ಜಿ.ಟಿ. ಜಯಕುಮಾರ್ ಅವರಿಗೆ ಸಮಸ್ಯೆಯಾಗಿ ಚಿತ್ರೀಕರಣ